ಸೆಳೆಯಿರಿ ಎಂದು ಹೇಳಿದ್ದಾರೆ. ಮೊನ್ನೆ ನಾವು ಯಾವುದೋ ಮೈನ್ಸ್ ಬಗ್ಗೆ ಮಾತನಾಡುವಾಗ ಆ ಸೇತುವೆ ಬಗ್ಗೆ ಹೇಳಿದೆವು. ಆ ಸೇತುವೆ ಆಗಲೋ ಈಗಲೋ ಬಿದ್ದು ಹೋಗುವ ಸ್ಥಿತಿಗೆ ಬಂದಿದೆ, ಅಲ್ಲಿ 70 ಟನ್ ಭಾರ ಹೊತ್ತ ಲಾರಿಗಳು ಓಡಾಡಬಾರದು ಎಂದು ಜನಗಳ ಪ್ರತಿಭಟನೆ ಇದೆ ಎಂದು ಹೇಳಿದ್ದೆವು. ಆ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂದು ಸರ್ಕಾರಕ್ಕೆ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಬಹಳ ದೊಡ್ಡ ಕಾರಣವಾಗಿರುವುದರಿಂದ ಶೀಘ್ರದಲ್ಲಿಯೇ ಅದರ ಬಗ್ಗೆ ಗಮನಹರಿಸಿ ಹಣಕಾಸನ್ನು ಒದಗಿಸಿ ಅದನ್ನು ದುರಸ್ತಿಗೊಳಿಸುತ್ತೇವೆ.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಬಹಳ ಜನ ನೋಟಿಸ್ ಕೊಟ್ಟು ಕಾಯುತ್ತಿದ್ದಾರೆ. ನಾವು ಲಿಸ್ಟ್ ಮಾಡಿದ್ದೇವೆ. ಕೆಲವು ಮುಖ್ಯ ವಿಚಾರಗಳಿಗೆ ನಾನು ಅವಕಾಶ ಮಾಡಿಕೊಟ್ಟಿದ್ದೇನೆ. ನಿಮಗೆ ನಾಳೆ ಅವಕಾಶ ಮಾಡಿಕೊಡುತ್ತೇನೆ. ಮಾನ್ಯ ಸಚಿವರು 30–40 ವಿಷಯಗಳ ಜನ ಲಿಸ್ಟ್ ಮಾಡಿದರೆ ಹೇಗೆ ಎಂದು ಹೇಳಿದರು. ನಾಳೆ ನಾಡಿದ್ದು ತಮಗೆ ಅವಕಾಶ ಮಾಡಿಕೊಡುತ್ತೇನೆ.

(ix) ವಿಷಯ : ಕಬ್ಬಿನ ಬೆಲೆ ನಿಗದಿಪಡಿಸುವುದರ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆದ ರೈತರು ಚಾಮರಾಜನಗರ ಮತ್ತು ಮೈಸೂರು ಸೇರಿದಂತೆ ರಾಜ್ಯಾದ್ಯಂತದ ರೈತರು ಇವತ್ತು ಬೆಂಗಳೂರು ನಗರಕ್ಕೆ ಬಂದಿದ್ದಾರೆ. ಕಬ್ಬಿಗೆ ಕೊಡತಕ್ಕಂತಹ ಬೆಲೆ ಬಹಳ ವರ್ಷಗಳ ಹಿಂದೆ ನಿಗದಿಯಾದದ್ದು. ಸುಮಾರು 825 ರಿಂದ 850 ರೂಪಾಯಿ ಕೊಡುತ್ತಿದ್ದಾರೆ. ಈಗ ಗೊಬ್ಬರದ ಬೆಲೆ ಜಾಸ್ತಿಯಾಗಿದೆ, ಅನೇಕ ವಿಚಾರಗಳಲ್ಲಿ ತೊಂದರೆಗೊಳಗಾಗಿದ್ದಾರೆ. ಆ 850 ರೂಪಾಯಿ ಅವರಿಗೆ ಯಾವುದಕ್ಕೂ ಸಾಕಾಗುವುದಿಲ್ಲ. ಈ ಪರಿಸ್ಥಿತಿ ಇರುವುದರಿಂದ 1250 ರೂಪಾಯಿಗೆ ಕಬ್ಬಿನ ಬೆಲೆಯನ್ನು ಜಾಸ್ತಿ ಮಾಡಬೇಕೆಂದು ಮುಖ್ಯ ಮಂತ್ರಿಗಳ ಮನೆಯ ಮುಂದೆ ರೈತರು ಧರಣಿ ಕೂತಿದ್ದಾರೆ. ಚಾಮರಾಜನಗರದಿಂದ ಬಂದಿದ್ದಾರೆ. ಮೈಸೂರಿನಿಂದ ಮತ್ತು ಇನ್ನು ಅನೇಕ ಕಡೆಗಳಿಂದ ರೈತರು ಬಂದಿದ್ದಾರೆ. ಇದು ಬಹಳ ಪ್ರಾಮುಖ್ಯ. ಎಲ್ಲಾ ಸಕ್ಕರೆ ಕಾರ್ಖಾನೆಗಳ ಮಾಲೀಕರನ್ನು ಕರೆಸಿ ಕೂಡಲೇ ದರವನ್ನು ಜಾಸ್ತಿ ಮಾಡಬೇಕು. 1250 ರೂಪಾಯಿ ಮಾಡಲೇಬೇಕು. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಸ್ಪಷ್ಟವಾದ ಉತ್ತರ ಕೊಡಬೇಕು. ಮಾಲೀಕರಿಗೆ ಯಾವಾಗ ಕರೆಸುತ್ತೀರಿ, ಯಾವಾಗ ಇದನ್ನು ತೀರ್ಮಾನ ಮಾಡುತ್ತೀರಿ, ಅನೇಕ ಕಡೆಗಳಿಂದ ಬಂದಂತಹ ರೈತರು ಇವತ್ತು ಮಾನ್ಯ ಮುಖ್ಯ ಮಂತ್ರಿಗಳ ಮನೆಯ ಮುಂದೆ ಸತ್ಯಾಗ್ರಹ ನಡೆಸುತ್ತಿದ್ದಾರೆ. ರೈತರು ಬೆಂಗಳೂರಿಗೆ ಬಂದಿದ್ದಾರೆ. ರೈತರ ಸಮಸ್ಯೆ ಬಹಳ ಬೃಹದಾಕಾರವಾಗಿದೆ. ತಾವು ಕೂಡಲೇ ಕಬ್ಬಿನ ದರವನ್ನು 850 ರೂಪಾಯಿಯಿಂದ1250 ರೂಪಾಯಿಗೆ ಜಾಸ್ತಿ ಮಾಡಬೇಕು. ಗೊಬ್ಬರದ ಬೆಲೆ

ತೀರಾ ಜಾಸ್ತಿಯಾಗಿದೆ. ಮೂರು ವರ್ಷಗಳ ಕಾಲ ಬಠಗಾಲ ಇತ್ತು. ಬೆಳೆಯಾಗಲಿಲ್ಲ. ಈ ಸಾರಿ ಬೆಳೆಯಾದಾಗ ಅವರಿಗೆ ಕೈ ಕಟ್ಟಿದೆ. ಈ ತೊಂದರೆ ಇರುವುದರಿಂದ ದಯವಿಟ್ಟು ಕಬ್ಬಿನ ದರವನ್ನು 1250 ರೂಪಾಯಿಗೆ ಜಾಸ್ತಿ ಮಾಡುವುದಕ್ಕೆ ತಾವು ಜರುರಾದ ಸಭೆಯನ್ನು ಕರೆಯಬೇಕು. ಅವರನ್ನು ಕರೆದು ಬೆಲೆ ಜಾಸ್ತಿ ಮಾಡತಕ್ಕಂಥ ಪ್ರಯತ್ನವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕೆಂದು ಮತ್ತು ಸದನಕ್ಕೆ ಈ ಭರವಸೆ ನೀಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಶ್ರೀ ವಾಟಾಳ್ ನಾಗರಾಜ್‌ರವರು ಮತ್ತು ಇನ್ನಿತರ ಸದಸ್ಯರೂ ಕೂಡ ಕಬ್ಬು ಬೆಳೆಗಾರರಿಗೆ ಆಗತಕ್ಕಂತಹ ಸಮಸ್ಯೆಗಳ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದಕ್ಕೂ ಮುಂಚೆ ಕೂಡ ಮಂಡ್ಯ, ಮೈಸೂರು ಬೇರೆ ಕಡೆಗಳಲ್ಲೆಲ್ಲಾ ರೈತರ ಮುಖಂಡರುಗಳು ಬಂದು ನನ್ನ ಜೊತೆ ಸಮಾಲೋಚನೆ ಮಾಡಿದ್ದಾರೆ. ಆಧಿವೇಶನದ ನಂತರ ಒಂದು ಪ್ರತ್ಯೇಕವಾದ ಸಭೆಯನ್ನು ಕರೆದು ನಾನು ಮಾತನಾಡುತ್ತೇನೆ ಎನ್ನುವಂತಹ ಅಶ್ವಾಸನೆ ಕೊಡುತ್ತೇನೆ. ಒಂದೆರಡು ದಿವಸಗಳಲ್ಲಿ ಸದನ ಮುಗಿಯುತ್ತದೆ, ಅದು ಮುಗಿದ ಮೇಲೆ ಮಾನ್ಯ ವಾಟಾಳ್ ನಾಗರಾಜ್‌ರವರೂ ಸೇರಿ, ಆ ಭಾಗದಲ್ಲಿರತಕ್ಕಂತಹ ಎಲ್ಲಾ ಶಾಸಕರು ಮತ್ತು ಉಪ ಮುಖ್ಯ ಮಂತ್ರಿಗಳು, ಎಲ್ಲರೂ ಸೇರಿ ಏನೇನು ಬೇಕಾಗುತ್ತದೆ, ಎಲ್ಲಿ ಎಷ್ಟು ಹಣ ಒದಗಿಸಬೇಕಾಗುತ್ತದೆ. ಇದಕ್ಕೆ ಬೆಲೆ ಕೊಡತಕ್ಕಂತಹ ರೀತಿಯಲ್ಲಿ ಚರ್ಚೆ ಮಾಡುತ್ತೇನೆ ಎನ್ನುವಂತಹ ಆಶ್ವಾಸನೆ ಕೊಡುತ್ತೇನೆ. ಆಗಲೇ ಮಾನ್ಯ ಸದಸ್ಯನಾದ ಜ್ಞಾನೇಂದ್ರದವರು ಹೇಳಿದರು, ಅಂಗನವಾಡಿ ಕಾರ್ಯಕರ್ತೆಯರ ಬಗ್ಗೆ ಅಧಿಕಾರ ವಿಕೇಂದ್ರೀಕರಣ ಮಾಡತಕ್ಕಂತಹ ರೀತಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಕೇಂದ್ರದ ಮತ್ತು ರಾಜ್ಯದ ಧನಸಹಾಯದಿಂದ ಸಂಬಳವನ್ನು ಕೊಡುತ್ತಿದ್ದೇವೆ. ಅದಕ್ಕೆ ನೇರವಾಗಿ ಪಂಚಾಯಿತಿಗೆ ವಹಿಸಿಕೊಟ್ಟಿದ್ದಾರೆ. ಮೊನ್ನೆ ಕಮುನಿಸ್ಟ್ ಪಕ್ಷದ ವತಿಯಿಂದ ಮತ್ತು ಬೇರೆ ಬೇರೆ ಮೂರು ನಾಲ್ಕು ಅಂಗನವಾಡಿ ಸಂಘ ಸಂಸ್ಥೆಗಳು ಇವೆ. ಅವರೆಲ್ಲಾ ಪ್ರತಿಭಟನೆ ಮಾಡುತ್ತಿದ್ದಾರೆ. ಪಂಚಾಯಿತಿಗೆ ಕೊಟ್ಟರೆ ನಮಗೆ ಸಂಬಳ ಸರಿಯಾಗಿ ಸಿಗುವುದಿಲ್ಲ. ಅದಕ್ಕೆ ಜಿಲ್ಲಾ ಪಂಚಾಯಿತಿಗೆ ಒದಗಿಸಿಕೊಡಬೇಕೆಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಸಂಬಳಕ್ಕಿಂತ ಹೆಚ್ಚಾಗಿ ಹಿಂಸೆಯೇ ಹೆಚ್ಚು.

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) : ಹಿಂಸೆ ಹೆಚ್ಚಾಗತ್ತದೆಯಾದ ಕಾರಣ ಜಿಲ್ಲಾ ಪಂಚಾಯತ್‌ಗೆ ವಹಿಸಿಕೊಡಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ಸಂಪುಟದಲ್ಲಿ ಚರ್ಚೆಯನ್ನು ನಾವು ಮಾಡುತ್ತೇವೆ. ಈ ರೀತಿಯಲ್ಲಿಯೇ ಎಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಧರಣಿಯನ್ನು ಮಾಡುತ್ತಿದ್ದರೋ ಅಲ್ಲಿಗೇ ಹೋಗಿ ಎಂದು ಹೇಳಿಬಂದಿದ್ದೇವೆ. ಇವೊತ್ತಿಗೂ ಕೂಡ ಇವರಲ್ಲಿಯೇ ಬೇರೆ ಬೇರೆ ಯೂನಿಯನ್‌ಗಳವರು ಬಂದಿದ್ದರು. ಕಂದಾಯ ಮಂತ್ರಿಗಳೂ ಕೂಡ ಈಗಾಗಲೇ ಇದಕ್ಕೆ ಸಂಬಂಧಪಟ್ಟಂತೆ ವಿವರವಾದಂಥ ಉತ್ತರವನ್ನು ಕೊಟ್ಟಿದ್ದಾರೆ. ಇಂದು ಸಂಪುಟದಲ್ಲಿ ಚರ್ಚೆ ಮಾಡಿ ಇದನ್ನು ಜಿಲ್ಲಾ ಪಂಚಾಯತ್‌ಗೆ ವಹಿಸುವ

ಬಗ್ಗೆ ಗಮನಕೊಡುತ್ತೇವೆ. ಇನ್ನು ಕಬ್ಬಿನ ರೈತರ ಬಗ್ಗೆ ಮಾತನಾಡಲು ಈಗಾಗಲೇ ಮಾನ್ಯ ಪ್ರಕಾಶ್ ಹುಕ್ಕೇರಿಯವರನ್ನು ರೈತರು ಇರುವ ಜಾಗಕ್ಕೇ ಕಳುಹಿಸಿದ್ದೇನೆ. ರೈತರೂ ಕೂಡ ನಮ್ಮ ಮನೆ ಮುಂದೆ ಧರಣಿ ಮಾಡಲು ಬರುತ್ತಿದ್ದಾರೆ ಎನ್ನುವ ಮಾತನ್ನು ತಾವು ಹೇಳಿದಿರಿ. ಈಗ ಅಲ್ಲಿ ಇದ್ದಾರೆ. ರೈತರಿಗಾಗಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ, ಬೀಜಕ್ಕೆ, ಗೊಬ್ಬರಕ್ಕೆ ಹಣ ಬಿಡುಗಡೆ ಮಾಡಿದ್ದೇವೆ, ಎಲ್ಲಿ ಇದರಲ್ಲಿ ತಾರತಮ್ಯವಾಗಿದೆ, ಎಲ್ಲಿ ಹಣ ಬಿಡುಗಡೆಯಾಗಬೇಕಾಗಿದೆ ಎನ್ನುವ ಬಗ್ಗೆ ಅವರ ಬೇಡಿಕೆಗಳ ವಿವರವನ್ನು ತೆಗೆದುಕೊಂಡು ಅದರ ಬಗ್ಗೆಯೂ ಕೂಡ ಸರ್ಕಾರ ಚಿಂತನೆ ಮಾಡುತ್ತದೆ.

ಶ್ರೀ ವಾಟಾಳ್ ನಾಗರಾಜ್ ; ಈಗಾಗಲೇ ರೈತರುಗಳು ತಮ್ಮ ಮನೆ ಮುಂದೆ ಬಂದು ಧರಣಿ ಮಾಡುತ್ತಿದ್ದಾರೆ. ಬಹಳ ಪ್ರಮುಖವಾಗಿ ಬೆಳೆ ವಿಮೆ ಪರಿಹಾರ ಹಣ ಬಿಡುಗಡೆ ಆಗದಿರುವ ಬಗ್ಗೆ ರೈತರುಗಳ ಮೇಲೆ ಕೇಸ್ ಹಾಕಿರುವಂಥದ್ದರ ಬಗ್ಗೆ, ಬಹಳ ಪ್ರಾಮುಖ್ಯವಾದ ಕಬ್ಬಿನ ದರದ ಬಗ್ಗೆ ಹೇಳಬೇಕು. ಈಗಿರುವ ಟನ್ ದರ 850 ರೂಪಾಯಿ ಏನಿದೆ ಆ ದರ ಬಹಳ ಹಳೆಯ ದರವಾಗಿದೆ. ಒಂದು ಟನ್‌ಗೆ 1250 ರೂಪಾಯಿ ಕೊಟ್ಟರೆ ಏನೋ ಒಂದು ರೀತಿ ಪರವಾಗಿಲ್ಲ ಎನ್ನಬಹುದು.

ಶ್ರೀ ಧರ್ಮಸಿಂಗ್ : ಹೌದು. ಏಕೆಂದರೆ ಅವರು ಬೇರೆ ಕಡೆ ನಿಂತಿದ್ದಾರೆ. ತಾವು ಸದನದಲ್ಲಿ ಇರುತ್ತೀರಿ ಎಂದು ನಾನು ಇಲ್ಲಿಗೆ ಬಂದೆ. ಅದಕ್ಕೇ ನಾನು ಪ್ರಕಾಶ್ ಹುಕ್ಕೇರಿಯವರೆಗೆ ಅಲ್ಲಿಗೆ ಹೋಗಿ ನೋಡಿಕೊಂಡು ಬನ್ನಿ ಎಂದು ಹೇಳುವುದರ ಜೊತೆಗೆ ಅವರ ಬೇಡಿಕೆಗಳನ್ನು ಕೇಳಿ ಮನವಿ ಪತ್ರ ಏನು ಕೊಡುತ್ತಾರೆ ಅದನ್ನು ಸ್ವೀಕಾರ ಮಾಡಿಕೊಂಡು ಬನ್ನಿ ಎಂದು ಹೇಳಿದ್ದೇನೆ. ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ.

(X) ವಿಷಯ : ಪುತ್ತೂರು ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಊಟದ ವ್ಯವಸ್ಥೆಯನ್ನು ನಿಲ್ಲಿಸಿರುವ ಬಗ್ಗೆ.

ಶ್ರೀಮತಿ ಶಕುಂತಲಾ ಟಿ. ಶೆಟ್ಟಿ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ಪುತ್ತೂರು ತಾಲ್ಲೂಕಿನಲ್ಲಿ 100 ಬೇಡ್‌ಗಳ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಇದೆ. ನಿನ್ನೆಯಿಂದ ಈ ಆಸ್ಪತ್ರೆಯಲ್ಲಿ ರೋಗಿಗಳಿಗೆ ಊಟ ಹಾಕುತ್ತಿದ್ದ ವ್ಯವಸ್ಥೆಯನ್ನು ನಿಲ್ಲಿಸಿಬಿಟ್ಟಿದ್ದಾರೆ. ನಿನ್ನೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವತಿಯಿಂದ ರೋಗಿಗಳಿಗೆ ಊಟದ ವ್ಯವಸ್ಥೆಯನ್ನು ಮಾಡಿದ್ದರು. ಇವೊತ್ತು ಸಾರ್ವಜನಿಕರು ಅಂಗಡಿ ಅಂಗಡಿಗೆ ಹೋಗಿ ಬೇಡಿ ಆಹಾರದ ಧಾನ್ಯ ತಂದು ಇವೊತ್ತಿಗೆ ಊಟದ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ಈ ಬಗ್ಗೆ ಆಸ್ಪತ್ರೆ ಡಿ.ಹೆಚ್.ಒ. ಅಥವಾ ಸಿ,ಎಸ್. ರವರನ್ನು ಹೋಗಿ ಕೇಳಿದರೆ ಅವರು ಏನು ಹೇಳುತ್ತಾರೆಂದರೆ ಜಿಲ್ಲಾ ಪಂಚಾಯತ್‌ನಲ್ಲಿ ಹಣವಿಲ್ಲದ ಕಾರಣ ಊಟದ ವ್ಯವಸ್ಥೆಯನ್ನು ನಿಲ್ಲಿಸಲಾಗಿದೆ ಎಂದು ಹೇಳಿದ್ದಾರೆ. ಊಟಕ್ಕೆ ಗತಿ ಇಲ್ಲದ ಬಡವರುಗಳೇ ಆ ಆಸ್ಪತ್ರೆಗೆ ರೋಗಿಗಳಾಗಿ ಹೋಗಿದ್ದಾರೆ. ಸ್ವಲ್ಪ ಊಟಕ್ಕೆ ಗತಿ ಇದ್ದರೂ ಸಾಕು, ಅಂಥವರುಗಳೂ ಕೂಡ ಸರ್ಕಾರಿ ಆಸ್ಪತ್ರೆಗೆ